# 24-09-2025

# NATIONAL SERVICE SCHEME DAY CELEBRATION

Vidyavardhaka Sangha ®

**Vidyavardhaka First Grade College**

**Sheshadri Iyer Road, Mysuru**

**ರಾಷ್ಟ್ರೀಯ ಸೇವಾ ಯೋಜನಾ ಘಟಕ**

**NATIONAL SERVICE SCHEME**

## ರಾಷ್ಟ್ರೀಯ ಸೇವಾ ಯೋಜನಾ ದಿನಾಚರಣೆ

**ಅಧ್ಯಕ್ಷತೆ**
**ಡಾ.ಎಸ್.ಮರೀಗೌಡ**
ಪ್ರಾಂಶುಪಾಲರು
ವಿದ್ಯಾವರ್ಧಕ ಪ್ರಥಮ
ದರ್ಜೆ ಕಾಲೇಜು

**ಮುಖ್ಯ ಅತಿಥಿಗಳು**
**ಡಾ.ಶೈಲೇಶ್ ರಾಜ್ ಅರಸ್**
ಮುಖ್ಯಸ್ಥರು, ಪತ್ರಿಕೋದ್ಯಮ ಮತ್ತು ಸಮೂಹ
ಸಂವಹನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತ ಗಂಗೋತ್ರಿ, ಮೈಸೂರು

**ಉಪಸ್ಥಿತಿ**
**ಶ್ರೀಮತಿ.ಲಾವಣ್ಯ.ಎಸ್**
ಅಧ್ಯಾಪಕ ಸಲಹೆಗಾರರು.
ವಿದ್ಯಾವರ್ಧಕ ಪ್ರಥಮ
ದರ್ಜೆ ಕಾಲೇಜು

---

**ಶ್ರೀ.ಸಿದ್ದರಾಜು.ಎಸ್**
ಸಂಯೋಜನಾಧಿಕಾರಿ
ರಾ.ಸೇ.ಯೋ ಘಟಕ
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ದಿನಾಂಕ: 24-09-2025 ಬುಧವಾರ|ಸಮಯ: 12.00 ಗಂಟೆಗೆ |ಸ್ಥಳ: ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ


Vidyavardhaka Sangha ®
Vidyavardhaka First Grade College
Sheshadri Iyer Road, Mysuru
ರಾಷ್ಟ್ರೀಯ ಸೇವಾ ಯೋಜನಾ ಘಟಕ
NATIONAL SERVICE SCHEME
ಡಾ.ಎಸ್.ಮರೀಗೌಡ
ಡಾ.ಶೈಲೇಶ್ ರಾಜ್ ಅರಸ್
ಪ್ರೊ.ಸಿದ್ದರಾಜು.ಎಸ್









ಅದಮ್ಯವಾದ, ಅಮೂರ್ತವಾದ ಚೈತನ್ಯದ ಮೂಲಕ ಸಮಾಜದಲ್ಲಿರುವ ಹಲವು ಸವಾಲುಗಳನ್ನು ಎದುರಿಸಿ ಗೆಲ್ಲುವ ಶಕ್ತಿಯನ್ನು ರಾಷ್ಟ್ರೀಯ ಸೇವಾ ಯೋಜನೆಯು ನೀಡುತ್ತದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮುಖ್ಯಸ್ಥರಾದ ಡಾ. ಶೈಲೇಶ್ ರಾಜ್ ಅರಸ್ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಏರ್ಪಡಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ 2025-26ನೇ ಶೈಕ್ಷಣಿಕ ಸಾಲಿನ ದೈನಂದಿನ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. 56 ವರ್ಷದ ರಾಷ್ಟ್ರೀಯ ಸೇವಾ ಯೋಜನೆಯ ದಿನಾಚರಣೆಯ ಈ ಸಂದರ್ಭದಲ್ಲಿ ಜಾಗತಿಕ ಕಾಲಘಟ್ಟದಲ್ಲಿ ಮನುಷ್ಯ ಹಣ, ಅಧಿಕಾರ, ವ್ಯವಹಾರದ ವ್ಯಾಮೋಹಕ್ಕೆ ಆಕರ್ಷಿತನಾಗಿ ಮನುಷ್ಯತ್ವದ ಸಂವೇದನೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಅವರ ವ್ಯಾಸಾಂಗದ ಅವಧಿಯಲ್ಲಿಯೇ ರಾ.ಸೇ.ಯೋ. ಮೂಲಕ ಸೇವಾ ಮನೋಭಾವನೆಯನ್ನು ಬಿತ್ತುವುದು ತುಂಬಾ ಅವಶ್ಯವಾಗಿದೆ. ಶಿಕ್ಷಣದ ಜೊತೆಗೆ ವ್ಯಕ್ತಿತ್ವ ವಿಕಸನವು ಬಹಳ ಮುಖ್ಯ.

ರಾಷ್ಟ್ರ ಕಟ್ಟುವ ಚಿಂತನೆ ಅನಾದಿ ಕಾಲದಿಂದಲೂ ಇದೆ. ರಾ.ಸೇ.ಯೋ ಮತ್ತು ಎನ್.ಸಿ.ಸಿ ವಿಕಸಿತ ಭಾರತ ಕಟ್ಟುವಲ್ಲಿ ಬಹಳ ಮುಖ್ಯವಾಗಿದ್ದು, ಸಚಿವಾಲಯವು 3 ಪ್ರಮುಖ ಅಂಶಗಳನ್ನು ಪ್ರಧಾನವಾಗಿಟ್ಟುಕೊಂಡಿದೆ ಅವುಗಳೆಂದರೆ ಡಿಜಿಟಲ್ ಸಧೃಢ ಭಾರತ, ಯೋಗದಿಂದ ವಿಶ್ವವನ್ನು ಸಧೃಢಗೊಳಿಸುವಲ್ಲಿ ಭಾರತದ ಪಾತ್ರ ಹಾಗೂ ಸುಸ್ಥಿರ ಭಾರತ ನಿರ್ಮಾಣ. ಜನರನ್ನು ಡಿಜಿಟಲ್ ವ್ಯಸನ ಮುಕ್ತರಾಗಿ ಮಾಡಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. ದೈಹಿಕ ಶ್ರಮಕ್ಕಿಂತ ಬೌದ್ಧಿಕ ಶ್ರಮ ಮಾತ್ರವಿದ್ದರೇ ಅದು ವ್ಯರ್ಥವಾಗುತ್ತದೆ. ಪರಿಸರ ಅಭಿವೃದ್ಧಿಗೆ ಮಾನವನ ವಿಕಾಸ ಶೀಲ ಅಭಿವೃದ್ಧಿಯೇ ಬಹಳ ಪ್ರಮುಖವಾಗಿರುತ್ತದೆ. ಜೊತೆಗೆ ಭಾರತವು ವಿಶ್ವ ಗುರುವಾಗುವಲ್ಲಿ ದೇಶದಲ್ಲಿರುವ ಯುವಜನರ ಪಾತ್ರ ಅತ್ಯಂತ ಪ್ರಮುಖವಾಗಿದ್ದು ಅದನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡುತ್ತಾ ಪ್ರಪಂಚದಲ್ಲಿಯೇ ಅತ್ಯಂತ ಆಕರ್ಷಕವಾದಂತಹ ವ್ಯಕ್ತಿತ್ವವಿರುವುದು ಶಿಕ್ಷಕರಿಗೆ ಅಂತಹ ಶಿಕ್ಷಕರು ವಿದ್ಯಾಥಿಗಳಲ್ಲಿ ಶಿಸ್ತು ಮತ್ತು ಸಂಯಮವನ್ನು ಕಲಿಸಲು ಸಹಕರಿಸುತ್ತಾರೆ. ಹಾಗೆಯೇ ಅವರ ಅಧ್ಯಯನದ ಅವಧಿಯಲ್ಲಿಯೇ ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ.ಯಂತಹ ಸಂಘಟನೆಗಳಿಗೆ ಸ್ವಪ್ರೇರಣೆಯಿಂದ ಸೇರಿ ವಿದ್ಯಾರ್ಥಿಗಳು ಸಾಮಾಜಿಕ ಐಕ್ಯತೆ, ರಾಷ್ಟ್ರೀಯ ಭಾವೈಕ್ಯತೆ, ಗ್ರಾಮ ಸಂಸ್ಕೃತಿ ಇತ್ಯಾದಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕೆಂದು ತಿಳಿಸಿದರು.

ಕು. ನಿಷಾ ಎಲ್ ರಾಜು ನಿರೂಪಿಸಿದ ಕಾರ್ಯಕ್ರಮದ ಸ್ವಾಗತವನ್ನು ರಾ.ಸೇ.ಯೋ ಘಟಕದ ಸಂಯೋಜನಾಧಿಕಾರಿ ಪ್ರೊ.ಎಸ್.ಸಿದ್ದರಾಜು ನೆರವೇರಿಸಿದರು. ಪ್ರಕೃತಿ ಮತ್ತು ತಂಡದವರು ರಾ.ಸೇ.ಯೋ ಗೀತೆಯನ್ನು ಹಾಡುವ ಮೂಲಕ ಪ್ರಾರ್ಥಿಸಿದರೇ ಶ್ರೇಯ ಯು ಘೊಬ್ಬ ವಂದಿಸಿದರು. ಅಧ್ಯಾಪಕ ಸಲಹೆಗಾರರಾದ ಪ್ರೊ.ಲಾವಣ್ಯ, ವಿದ್ಯಾರ್ಥಿಗಳು, ಅಧ್ಯಾಫಕರು ಹಾಗೂ ಅಧ್ಯಾಪಕೇತರರು ಉಪಸ್ಥಿತರಿದ್ದರು.










Vidyavardhaka First Grade College
Sheshadri Iyer Road, Mysuru
NATIONAL SERVICE SCHEME


Vidyavardhaka First Gra
Sheshadri Iyer Road,


Vidyavardhaka Sangha
Vidyavardhaka First Grade College
Sheshadri Iyer Road, Mysuru
NATIONAL SERVICE SCHEME




Vidyavardhaka First Grade College
Sheshadri Iyer Road, Mysuru
ರಾಷ್ಟ್ರೀಯ ಸೇವಾ ಯೋಜನಾ ಘಟಕ
NATIONAL SERVICE SCHEME


Vidyavardhaka First Grade College
Sheshadri Iyer Road, Mysuru
ರಾಷ್ಟ್ರೀಯ ಸೇವಾ ಯೋಜನಾ ಘಟಕ
NATIONAL SERVICE SCHEME




24-09-2025